‘ಪಂಚತಂತ್ರ’ದ ಬೆಡಗಿ ಸೋನಲ್ ಕೈಯಲ್ಲೀಗ ರಾಶಿ ರಾಶಿ ಸಿನಿಮಾಗಳು. ಸೂಪರ್ ಸ್ಟಾರ್‌ಗಳ ಜೊತೆಗೂ, ಹೊಸಬರ ತಂಡದೊಟ್ಟಿಗೂ ಏಕಕಾಲದಲ್ಲಿ ಕೆಲಸ ಮಾಡುತ್ತಿರುವ ಅವರಿಗೆ ಜಯತೀರ್ಥ ನಿರ್ದೇಶನದ ‘ಬನಾರಸ್’ ಸಿನಿಮಾ ಕುರಿತು ಸಾಕಷ್ಟು ನಿರೀಕ್ಷೆ ಇದೆ. ಈ ಚಿತ್ರದ ಚಿತ್ರೀಕರಣಕ್ಕಾಗಿ ಒಂದು ತಿಂಗಳು ವಾರಾಣಸಿಯಲ್ಲಿ ಕಳೆದು ಬಂದ ಅನುಭವವನ್ನು ಇಲ್ಲಿ ಹಂಚಿಕೊಂಡಿದ್ದಾರೆ.

# ಬನಾರಸ್‌ವಾಲಿ ಸೋನಲ್

■ ಪದ್ಮನಾಭ ಭಟ್



‘ಅವತ್ತು ಶೂಟಿಂಗ್ ಮಧ್ಯ ಕೊಂಚ ಬಿಡುವಿತ್ತು. ನಿರ್ದೇಶಕರ ಜಯತೀರ್ಥ ಅವರು ಸುತ್ತಮುತ್ತ ನೋಡಿಕೊಂಡು ಬಾ ಎಂದು ಕಳುಹಿಸಿದರು. ನಾನು ನೋಡಲು ಹೊರಟೆ. ಅಬ್ಬಾ! ಅಂಥ ದೃಶ್ಯವನ್ನು ನಾನು ಅದುವರೆಗೆ ನೋಡೇ ಇರಲಿಲ್ಲ. ಅಲ್ಲಿನ ಘಾಟ್‌ಗಳಲ್ಲಿ ಪ್ರತಿದಿನ ಪ್ರತಿಕ್ಷಣವೂ ಒಂದಿಲ್ಲೊಂದು ಹೆಣ ಸುಡುತ್ತಿರುತ್ತಾರೆ. ಮೊದಮೊದಲಿಗೆ ಅದನ್ನು ನೋಡಿ ಹೆದರಿಕೆ ಆಯ್ತು. ಆದರೆ ನಂತರ ಅದೇ ರೂಢಿಯಾಯ್ತು. ಅಲ್ಲಿ ಕಳೆದ ಮೂವತ್ತೈದು ದಿನಗಳಲ್ಲಿ ಅದನ್ನೇ ನೋಡಿ ನೋಡಿ ಕೊನೆ ಕೊನೆಗೆ ಏನೂ ಅನಿಸುತ್ತಲೇ ಇರಲಿಲ್ಲ’

ಇಷ್ಟು ಹೇಳಿ ಕೊಂಚ ಸಮಯ ಸುಮ್ಮನಾದರು ಸೋನಲ್ ಮೊಂತೆರೊ. ಬಹುಶಃ ತಾವು ಕಂಡುಂಡ ಅನುಭವಗಳನ್ನು ಮನಸಲ್ಲೇ ಮೆಲುಕು ಹಾಕಿಕೊಳ್ಳುತ್ತಿದ್ದರೇನೋ. ಅವರು ನಾಯಕಿಯಾಗಿ ನಟಿಸುತ್ತಿರುವ ‘ಬನಾರಸ್’ ಚಿತ್ರೀಕರಣಕ್ಕಾಗಿ ವಾರಾಣಸಿಯಲ್ಲಿ ಕಳೆದ ದಿನಗಳ ಕುರಿತು ಅವರು ಮಾತನಾಡುತ್ತಿದ್ದರು. ಸೋನಲ್ ವಾರಾಣಸಿಯನ್ನು ನೋಡಿದ್ದು ಅದೇ ಮೊದಲು. ಅಲ್ಲಿ ಮೂವತ್ತೈದು ದಿನಗಳ ಚಿತ್ರೀಕರಣ ಮುಗಿಸಿ ವಾಪಸ್ ಬಂದಿದ್ದರೂ ಆ ಜಾಗ ಕಟ್ಟಿಕೊಟ್ಟ ಚಿತ್ರಗಳನ್ನು ಮರೆಯಲು ಅವರಿಗೆ ಸಾಧ್ಯವಾಗುತ್ತಿಲ್ಲ. ಆ ಕುರಿತು ಮಾತಾಡುವಾಗ ಅವರ ಧ್ವನಿಯಲ್ಲಿ ಉತ್ಸಾಹ ಎದ್ದು ಕಾಣುತ್ತದೆ.

‘ವಾರಾಣಸಿಯ ಬಗ್ಗೆ ಕೇಳಿದ್ದೆ. ಗೂಗಲ್, ಅಲ್ಲಿ ಇಲ್ಲಿ ಚಿತ್ರಗಳನ್ನೂ ನೋಡಿದ್ದೆ. ಆದರೆ ನಾನೇ ಅಲ್ಲಿಗೆ ಹೋದಾಗ, ಅದೂ ಚಿತ್ರೀಕರಣಕ್ಕೆಂದು ಹೋದಾಗ ಆದ ಅನುಭವವೇ ವಿಭಿನ್ನ. ನಾವು ಹೋದಾಗ ಅಲ್ಲಿ ಭಯಂಕರ ಚಳಿ. ಉಷ್ಣಾಂಶ ನಾಲ್ಕು, ಐದು ಡಿಗ್ರಿಗೆಲ್ಲ ಇಳಿದುಬಿಡುತ್ತಿತ್ತು. ಜೊತೆಗೆ ಅಷ್ಟೇ ಮಂಜು. ಸೂರ್ಯ ತಡವಾಗಿ ಹುಟ್ಟಿ ಬೇಗ ಮುಳುಗುತ್ತಿದ್ದ. ಅದರ ನಡುವೆಯೇ ಚಿತ್ರೀಕರಣ ಮಾಡಬೇಕಾದ ಸವಾಲು. ಈ ಸವಾಲು ಕಲಾವಿದರಾದ ನಮಗಿಂತಲೂ ನಿರ್ದೇಶಕ ಜಯತೀರ್ಥ ಮತ್ತು ಛಾಯಾಗ್ರಾಹಕ ಅದ್ವೈತ ಗುರುಮೂರ್ತಿ ಅವರಿಗೆ